11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟು ಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳ್ಗೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಡುವ ಅಕ್ಕಿ, ರಾಗಿ ಮತ್ತು ಬೇಳೆ ಮುಂತಾದ್ದು ಮಾಡಲ್ಪಟ್ಟು ತವಡು ಇಲ್ಲದೇ ಇರಬೇಕು. ಸರಬರಾಯಿ ಮಾಡುವದಕ್ಕೆ ಮುಂಚಿತವಾಗಿಯೇ ಮೆಣಸಿನಕಾಯಿ ಹುಂಬನ್ನೂ ಹುಣಿಸೇಹಣ್ಣಿನ ನಾರು ವ ಬೀಜವನ್ನೂ ತೆಗದಿರಬೇಕು.

14. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಗಾಗಲಿ, ಕಿರದು ತರದ ಯಾವ ಪದಾರ್ಥಗಳನ್ನಾದರೂ ಕೊಟ್ಟುಲ್ಲಾಗಲಿ ಮೈಸೂರ ಜೈಲ್ ಸೂಪರ್‌ಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮಿಾರದ ಬಂದು ಜುರ್ಮಾನೆಯು ವಿಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀರ್ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡಬಹುದು.

15. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು, ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈರ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಆಹಾರ ದರದ ಪಟ್ಟಿಯನ್ನೂ, ವ ಇತರ ತಪಶೀಲುಗಳನ್ನೂ, ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಪಡೆಯಬಹುದು ಹಾಲಿ ಮೈಸೂರು ಜೈಲ್‌ನಲ್ಲಿ 300 ಮಂದಿ ಖೈದೀರಿರುತ್ತಾರೆ ಈ ಸಾಲ್‌ನಲ್ಲಿ ಸುಮಾರು 350 ಮಂದಿವರಿಗೂ ಜಾಸ್ತಿಯಾಗಬಹುದು.

ಪಿ. ಹೆಚ್. ಕ್ಯಸ್ಯ, ಎಂ. ಬಿ., ಸೂ. ಮೈಸೂರ ಜೈಲ್.

ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ್.

ತಾರೀಖು 1ನೇ ಮಾರ್ಚೀ 1887.

ಫ್ರೆಂಚರಾಕ್ಸ್ ಸಬ್ ಡಿವೀರ್ಜ ಮಂಡ್ಯ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ನಮೂದಾಗುವ ದಸ್ತಾವೇಜನ್ನ ಕ್ರಮವಾದ ವಾರಸ್ದಾರನಾಗಲೀ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಕಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾರರು ಮತ್ತು ಸಬ್ ರಿಜಿಸ್ಟ್ರಾರರು ದಸ್ತಾವೇಜಿನ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 107 ——— 1884—85	ಮಂಡ್ಯದಲ್ಲಿ ಯಿರುವ ಜೈನರ ಮಣಿಯಪ್ಪನವರ ಬ್ರಹ್ಮಯ್ಯ	ಮಂಡ್ಯದ ಕಸಬಾದಲ್ಲಿರುವ ಜೈನರ ಮಾಡಗಲ್ಲು ಮರಿಯಂಣನವರ ಚಿಕ್ಕಣಪ್ಪ	18—11—84	19—11—84	ಯಿದೆ ತಾಲ್ಲೂಕು ಕೊತ್ತತ್ತಿ ಹೋಬಳಿ ಗುತ್ತಲ್ ಗ್ರಾಮದಲ್ಲಿ ನಮ್ಮ ಅತ್ತಿಗೆ ಪದ್ಮಾವತಮ್ಮನಿಂದ ನನಿಗೆ ಕ್ರಯವಾಗಿರುವ ತರೀ ಜಮೀನು ಚೌತರ ಪು ಆನೆಕೆರೆ ತೋಟದಪ್ಪನ ತೆಂಗಿನ ತೋಟಕ್ಕೆ ಪ ಶ್ಚಿಮ, ಕೆರೇ ಏರಿಗೆ ಪೂರ್ವ, ಪಸ್ತರ ಕೊಡಿಗೆ ಗ ದ್ದೆಗೆ ಪುತ್ತರ ಕೆರೆ ಏರಿಗೆ ದಕ್ಷಿಣ ಈ ಮಧ್ಯೆ ಯಿರುವ ನಂಬರ್ 945ನೇ ತರೀ ಬೀಜವರಿ 0-19-$11\frac{1}{4}$ ಕಂದಾಯ 14-5-3 ಲೋಕಲ್0-14-4 ಜುಮ್ಮಾ 15—3—7ನೆ ವುಳ್ಳದ್ದನ್ನು ಗವರ್ಮೆಂಟ್ 100 ರೂಪಾಯಿಗೆ ಕುದ್ದ ಕ್ರಯಕ್ಕೆ ಕೊಟ್ಟು ಯಿರುವದಾಗಿ.

ಬಿ. ಕೆ. ವೆಂಕಟವರದಯ್ಯಂಗಾರ್,

ರಿಜಿಸ್ಟ್ರಾರ್.